# ಆಡಳಿತಾಧಿಕಾರಿಗಳು

## ಪದನಿಮಿತ್ತ ಪುನರ್ವಸತಿ ಅಧಿಕಾರಿಗಳು,

ಕೃಷ್ಣಾ ಮೇಲ್ದಂಡೆ ಯೋಜನೆ, ನಾರಾಯಣಪೂರ

ಜೇವರ್ಗಿ ತಾಲೂಕಿನ ವಸ್ತಾರಿ ಗ್ರಾಮದ ಕೆಲವು ಜಮೀನುಗಳು

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಜೆ.ಬಿ.ಸಿ. ವಿತರಣಾ ನಾಲಾ–12ಎ ಆಫ್ ಲ್ಯಾ–3 ರ ನಿರ್ಮಾಣಕ್ಕಾಗಿ ಭೂಸ್ವಾಧೀನ–2013 ಅನ್ವಯ ಕಲಂ 16(2) ಅನ್ವಯ

ಪುನರ್ವಸತಿ ಹಾಗೂ ಪುನರ್‌ವ್ಯವಸ್ಥೆಯು ಕರಡು ಯಾದಿ.

# ಕರ್ನಾಟಕ ಸರಕಾರ
## ಕೃಷ್ಣಾ ಮೇಲ್ದಂಡೆ ಯೋಜನೆ

ಸಂಖ್ಯೆ:ಪುಅನಾ/ಅರ್.ಆರ್.ಎ.ಪಿ/ಗ್ರಾಮ/ವಸ್ತಾರಿ/ಸಿಆರ್-36/2015-16 ದಿನಾಂಕ: 04.05.2016

ಜೆ.ಬಿ.ಸಿ. ವಿತರಣಾ ನಾಲಾ-12ಎ ಆಫ್ ಲ್ಯಾ-3 ರ ನಿರ್ಮಾಣಕ್ಕಾಗಿ ಜೇವರ್ಗಿ ತಾಲೂಕಿನ ಕೋಣಶಿರಿಸಿಗಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುತ್ತಿದ್ದು ಜಮೀನುಗಳ ಮಾಲೀಕರಿಗಾಗಿ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ "ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ 2013" (The Right to Fair Compensation And Transparency in Land Acquisition Rehabilitation and Resettlement Act – 2013) ಕಲಂ 16(2) ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕರಡು ಯಾದಿ.

**ಜಿಲ್ಲೆ: ಕಲಬುರ್ಗಿ ತಾಲ್ಲೂಕ: ಜೇವರ್ಗಿ ಹೋಬಳಿ: ಯಡ್ರಾಮಿ ಗ್ರಾಮ: ವಸ್ತಾರಿ**

**ಪ್ರಸ್ತಾವನೆ**

1) ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮಾಲೀಕರಿಗೆ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ರೀತಿಗಳಲ್ಲಿ ಅರಿವು ಮೂಡಿಸಲಾಗಿದೆ.
2) ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂ ಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ -2013 ರನ್ವಯ ಕಲಂ.11 (1) ರಡಿ (LAQ/SR/16/2014-15) ಗುರುವಾರ ಫೇಬ್ರುವರಿ 12-2015 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.
3) ಪುನರ್ ವಸತಿ, ಪುನರ್ ವ್ಯವಸ್ಥೆಯ ಈ ಕರಡು ಯಾದಿಯನ್ನು ಕಲಂ.11(1) ರ ಅಧಿಸೂಚನೆಯ ಪ್ರಕಟಣೆಯನ್ನು, ಸಂಯುಕ್ತ ಮೋಜನಿ ಸರ್ವೆ ,ಗಣತಿ ಸಮೀಕ್ಷಾ ವರದಿ ಆಧಾರವಾಗಿ ಇಟ್ಟುಕೊಂಡು ತಯಾರಿಸಲಾಗಿದೆ.
4) ವಸ್ತಾರಿ ಗ್ರಾಮದ ಜಮೀನುಗಳಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರಕಾರಿ ಕಟ್ಟಡಗಳು ಇರುವದಿಲ್ಲ.
5) ಈ ಕರಡು ಯಾದಿಯು RTFCTLARR Act– 2013 ಕಲಂ.16, 16 (4), 16(5) ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂದರ್ಭಾನುಸಾರ ಬದಲಾವಣೆಗೆ ಒಳಪಡುತ್ತದೆ.

6) ಜೆ.ಬಿ.ಸಿ. ವಿತರಣಾ ನಾಲಾ–12ಎ ಆಫ್ ಹಾಗೂ ಲ್ಯಾ–3 ರ ನಿರ್ಮಾಣಕ್ಕಾಗಿ ಜೇವರ್ಗಿ ತಾಲೂಕಿನ ವಸ್ತಾರಿ ಗ್ರಾಮದ ಜಮೀನುಗಳನ್ನು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ–2013 (The Right to Fair Compensation and Transparency in Land Acquisition, Rehabilitation and Resettlement Act, 2013) ಸದರಿ ಅಧಿನಿಯಮದ "ಅನುಸೂಚಿ– 2" ರ ಅನುಸಾರ ಹಾಗೂ ಕಲಂ.31 ರ ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕುರಿತು ಭೂಸ್ವಾಧೀನ ಕಾಯ್ದೆ–2013 ರ ನಿಯಮಾನುಸಾರ ಕ್ರಮ ಕೈಕೊಳ್ಳಲಾಗುವುದು.

7) **ವಸ್ತಾರಿ ಗ್ರಾಮದ ಜಮೀನುಗಳ** ಸದರಿ ಪ್ರಕರಣವು, RTFCTLARR Act –2013, ರನ್ವಯ ಕಲಂ. 11(1) ರ ಅಧಿಸೂಚನೆ ಪ್ರಕಾರ ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಹೊಸ ಭೂಸ್ವಾಧೀನ ಕಾಯ್ದೆಯ ಕಲಂ.45 ರ ನಿಬಂಧನೆಗಳು ಅನ್ವಯಿಸುದಿಲ್ಲ.

8) ಸರಕಾರವು ಕಾಲ ಕಾಲಕ್ಕೆ ಹೊರಡಿಸುವ ಭೂಸ್ವಾಧೀನ ಕಾಯ್ದೆ, ಕಾನೂನು ನಿಯಮಗಳ ಅನ್ವಯ ಸದರಿ ಕರಡು ಯಾದಿಯು ಬದಲಾವಣೆಗೆ ಒಳಪಡುತ್ತದೆ.

9) ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳು ವಹಿವಾಟುಗಳ ಪ್ರಕಾರ ಪೋಡಿಯಾಗಿದ್ದಲ್ಲಿ ಅಥವಾ ಪೋಡಿಯಾಗಬೇಕಾಗಿದ್ದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಭೂ ಮಾಲೀಕರು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಹಾಜರುಪಡಿಸಬೇಕು.

10) ಕರಡು ಯಾದಿಯ ಕಾಲಂ 11 ರಲ್ಲಿ ಬಾಧಿತಗೊಳ್ಳುವ ಕುಟುಂಬಗಳ ಜಮೀನುಗಳು ಶೇಕಡ 50% ಗಿಂತ ಕಡಿಮೆ ಜಮೀನನ್ನು ಕಳೆದುಕೊಳ್ಳುತ್ತಿರುವುದರಿಂದ ಸದರಿ ಕುಟುಂಬಗಳ ಮುಖ್ಯ ಆಧಾರ ಜೀವನೋಪಾಯ (Primary source of livelihood) ಕ್ಕೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ ಎಂದು ತೀರ್ಮಾನಿಸಲಾಗಿದೆ.

11) ವಸ್ತಾರಿ ಗ್ರಾಮದ ಸರ್ವೆ ನಂಬರಗಳಾದ: ಜೆ.ಬಿ.ಸಿ. ವಿತರಣಾ ನಾಲಾ 12ಎ ಆಪ್ ಲ್ಯಾ–3 ರ ಸ.ನಂ. 99/5, 1/3 3/2 ಇರುತ್ತವೆ. ಸದರಿ ಕುಟುಂಬಗಳ ಜೀವನೋಪಾಯದ ಮುಖ್ಯ ಆಧಾರ (Primary Source of Livelihood) ಕ್ಕೆ ಧಕ್ಕೆ ಉಂಟಾಗುವ ಕುರಿತು ಭೂಮಾಲೀಕರು ಒದಗಿಸುವ ಒಟ್ಟು ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಜಮೀನುಗಳ ಭೂಹಿಡುವಳಿ ಪ್ರಮಾಣಪತ್ರ, ಒಟ್ಟು ಜಮೀನು ಇರುವ ಬಗ್ಗೆ ಘೋಷಿಸಿಕೊಂಡ ಶಪಥಪತ್ರ (ಅಫಿಡವಿಟ್) ಹಾಗೂ ವಾರ್ಷಿಕ ಆದಾಯದ ವಿವರಗಳನ್ನು ಪಡೆದು ತೀರ್ಮಾನಿಸಲಾಗುವುದು.

12)ಗಣತಿ ಸಮೀಕ್ಷೆ ಕಾರ್ಯದ ಸಮಯದಲ್ಲಿ ಭೂ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ಭೂ ಮಾಲೀಕರ ಕುಟುಂಬದ ಸದಸ್ಯರ ಮಾಹಿತಿ ಪಡೆಯಲು ಭೂಮಾಲೀಕರ ಮನೆ ಮನೆಗೆ ಭೇಟಿ ನೀಡಿದ್ದು ಇರುತ್ತದೆ, ಆದಾಗ್ಯೂ ಕೆಲವು ಭೂ ಮಾಲೀಕರು ತಮ್ಮ ಕುಟುಂಬ ಸದಸ್ಯರ ಮಾಹಿತಿ/ದಾಖಲೆ ನೀಡಿರುವುದಿಲ್ಲ, ಬಾಧಿತಗೊಳ್ಳುವ ಕುಟುಂಬದ ಸದಸ್ಯರ ಮಾಹಿತಿಗಳು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಪರಿಯೋಜನೆಯನ್ನು ತಯಾರಿಸಲು ಅತ್ಯವಶ್ಯಕವಾಗಿದ್ದು, ಮಾಹಿತಿ ನೀಡದೆ ಇರುವ ಭೂ ಮಾಲೀಕರು ತಮ್ಮ ಕುಟುಂಬದ ಸದಸ್ಯರ ಮಾಹಿತಿಯನ್ನು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ನೀಡುವುದು ಅಥವಾ ಪುನರವಸತಿ ಅಧಿಕಾರಿಗಳು

ನಾರಾಯಣಪೂರ ಇವರ ಕಛೇರಿಯನ್ನು ಸಂಪರ್ಕಿಸಿ ದಿನಾಂಕ:02.06.2016 ರೊಳಗೆ ಮಾಹಿತಿ ನೀಡಲು ಸೂಚಿಸಿದೆ. ತಪ್ಪಿದಲ್ಲಿ ಸೌಲಭ್ಯವಂಚಿತರಾದಲ್ಲಿ ತಾವೇ ಹೊಣೆಗಾರರಾಗುತ್ತೀರಿ. ಹೆಚ್ಚಿನ ವಿವರ ಮತ್ತು ಮಾಹಿತಿಗಳಿಗಾಗಿ ಪುನರ್ ವಸತಿ ಅಧಿಕಾರಿಗಳ ಕಾರ್ಯಾಲಯ ಕೃ.ಮೇ.ಯೋ, ನಾರಾಯಣಪೂರ ಇವರ ಕಛೇರಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಆಡಳಿತಾಧಿಕಾರಿಗಳು
ಪದನಿಮಿತ್ತ ಪುನರ್‌ವಸತಿ ಅಧಿಕಾರಿಗಳು,
ಕೃ.ಮೇ.ಯೋ. ನಾರಾಯಣಪೂರ